# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 35/2021**

**ಕಲಂ 299 ರಡಿಯಲ್ಲಿ ಸಾಕ್ಷಿವಿಚಾರಣೆಃ**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 05-11-2022 ರಂದು ಪ್ರಮಾಣ ಮಾಡಿಸಲಾಯಿತು

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಶಂಕರ ನಾರೆನವರ | ಪ್ರಾ.ಸಾ ಃ 01 |
| ತಂದೆ ಃ ಗಂಡ ಹೆಸರು | ಃ | ವಿಠಲ | **ಚಾ**.ಸಾ ಃ 01 |
| ವಯಸ್ಸು | ಃ | 42 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸಸ್ಥಳ | ಃ | ಕಲಘಟಗಿ | |

**ಮುಖ್ಯ ವಿಚಾರಣೆ ಃ ಎ ಪಿ ಪಿ ಅವರಿಂದ**

ಸುಮಾರು 5 ವರ್ಷಗಳ ಹಿಂದೆ ಸಂಜೆ 4-00 ರ ಸಮಯದಲ್ಲಿ ನಾನು ನನ್ನ ಮೋಟರ ಸೈಕಲನಲ್ಲಿ ಹೊಲಕ್ಕೆ ಹೊರಟಿದ್ದಾಗ ಗಲಗಿನಕಟ್ಟಿ ಕ್ರಾಸ್ ಹತ್ತಿರ ಇಬ್ಬರು ವ್ಯಕ್ತಿಗಳು ಇನ್ನೊಂದು ಮೋಟರ ಸೈಕಲನಲ್ಲಿ ಬಂದು ನನ್ನನ್ನು ಅಡ್ಡಗಟ್ಟಿ ನಿಲ್ಲಿಸಿ, ನನಗೆ ಚಾಕು ತೋರಿಸಿ, ಹೆದರಿಸಿ ನನ್ನ ಬಳಿ ಇದ್ದ ರೂ 1600/- ನ್ನು ಕಿತ್ತುಕೊಂಡು ನನ್ನ ಮೋಟರ ಸೈಕಲ ಕಸಿದುಕೊಂಡು ಹೋದರು. ಆ ಬಗ್ಗೆ ದೂರು ಸಲ್ಲಿಸಿದ್ದೇನೆ. ದೂರು ನಿಪಿ-1 ಎಂದು, ಸಾಕ್ಷಿ ಸಹಿ ನಿಪಿ-1 (ಎ) ಎಂದು ಗುರುತಿಸಿದೆ. ನಂತರ ಪೋಲೀಸರು ಆರೋಪಿತರನ್ನು ಬಂದಿಸಿದಾಗ ಅವರನ್ನು ಗುರುತಿಸಿ ಹಾಗೂ ಮೋಟರ ಸೈಕಲನ್ನು ಗುರುತಿಸಿ, ವಾಪಸ್ಸ ಪಡೆದು ಆ ಬಗ್ಗೆ ಮರು ಹೇಳಿಕೆಗಳನ್ನು ನೀಡಿದ್ದೇನೆ.

ನಂತರ ಪೋಲೀಸರು ಘಟನಾ ಸ್ಥಳಕ್ಕೆ ಬಂದಾಗ ನಾನು ಸ್ಥಳ ತೋರಿಸಿದ್ದು, ಅಲ್ಲಿ ಪೋಲೀಸರು ಪಂಚರ ಸಮಕ್ಷಮ ಮಹಜರ ಮಾಡಿ, ಕಚ್ಚಾ ನಕ್ಷೆ ತಯಾರಿಸಿರುತ್ತಾರೆ. ಅದೇ ಸಮಯದಲ್ಲಿ ಪೋಟೋ ತೆಗೆದಿದ್ದು, ಅದನ್ನು ನಿಪಿ-2 ಎಂದು ಗುರುತಿಸಿದೆ. ನಂತರ ಪೋಲೀಸರು ನನಗೆ ಆರೋಪಿತರು ಕದ್ದಿದ್ದ ಹಣ ಹಾಗೂ ಮೋಟರ ಸೈಕಲ್ ವಾಪಸ್ಸ ನೀಡಿದ್ದಾರೆ. ಆ ದಿನ ನನ್ನಿಂದ ಹಣ ಹಾಗೂ ಮೋಟರ ಸೈಕಲ ಕದ್ದ ಆರೋಪಿತರ ಪೈಕಿ 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.